ಶ್ರೀ ಟಿ. ಚನ್ನಯ್ಯ.—ಈಗ 3 ಮೈಲಿ 3 ಫರ್ಲಾಂಗಿಗೆ ಮಾತ್ರ ಅಂದಾಜು ತಯಾರಾಗಿದೆ. ಇಷ್ಟಕ್ಕೆ ಮೆಟಲ್ ಹಾಕಬೇಕಾಗಿದೆ.

ಶ್ರೀ ಬಿ. ಟಿ. ಕೆಂಪರಾಜ್.—ಈಗ ಈ ಅಂದಾಜು ಮಂಜೂರಾಗಿದೆಯೇ?

ಶ್ರೀ ಟಿ. ಚನ್ನಯ್ಯ.—ಮಂಜೂರಾಗುವುದರಲ್ಲಿದೆ.

ಶ್ರೀ ಬಿ. ಟಿ. ಕೆಂಪರಾಜ್.—ಎಷ್ಟು ಮೈಲಿ ರಸ್ತೆ ರಿಪೇರಿಗೆ ಈಗ ಅಂದಾಜು ತಯಾರಾಗಿದೆ?

ಶ್ರೀ ಟಿ. ಚನ್ನಯ್ಯ.—ಅಂದಾಜಾಗಿರತಕ್ಕ ಮೊಬಲಗಿನಲ್ಲಿ ಎಷ್ಟು ಕೆಲಸ ಮಾಡಲು ಸಾಧ್ಯವೋ ಅಷ್ಟು ಮೈಲಿ ರಸ್ತೆಯನ್ನು ರಿಪೇರಿ ಮಾಡಲಾಗುವುದು.

ಶ್ರೀ ಬಿ. ಟಿ. ಕೆಂಪರಾಜ್.—ಎಷ್ಟು ಮೈಲುಗಳಿಗೆ ಅಂದಾಜಾಗಿದೆ ಎಂದು ಕೇಳಿದೆ?

ಶ್ರೀ ಟಿ. ಚನ್ನಯ್ಯ.—2,700 ರೂಪಾಯಿಗಳ ಮೊತ್ತದಲ್ಲಿ ಎಷ್ಟಾಗುತ್ತದೋ ಅಷ್ಟು ಮಾಡಲಾಗುತ್ತದೆ.

ಶ್ರೀ ಬಿ. ಟಿ. ಕೆಂಪರಾಜ್.—ಎಷ್ಟು ದಿವಸಗಳಲ್ಲಿ ಈ ಕೆಲಸವನ್ನು ಕೈಗೊಳ್ಳಲಾಗುತ್ತದೆ?

ಶ್ರೀ ಟಿ. ಚನ್ನಯ್ಯ.—ಆದಷ್ಟು ಜಾಗ್ರತೆ ಕೈಗೊಳ್ಳಲಾಗುತ್ತದೆ.

1 P.M

Sri A. V. NARASIMHA REDDY.—When was this estimate prepared?

Sri T. CHANNIAH.—Notice.

ಶ್ರೀ ಎಸ್. ಎಂ. ಲಿಂಗಪ್ಪ.—ಬೂಕನಕೆರೆಯಿಂದ ಹೋಗುವ ರಸ್ತೆಯು ಗ್ರಾಮಾಭ್ಯುದಯ ನಿಧಿಯಿಂದ 8 ವರ್ಷಗಳ ಹಿಂದೆ ನಿರ್ಮಿಸಿರತಕ್ಕ ರಸ್ತೆ ಅಲ್ಲವೆ?

ಶ್ರೀ ಟಿ. ಚನ್ನಯ್ಯ.—ಈಗ ಒಂದು ಹೊಸ ರಸ್ತೆಯಾಗಿ ಮಾಡಲಿಕ್ಕೆ 8,000 ರೂಪಾಯಿಗಳ ಅಂದಾಜನ್ನು ಮಂಜೂರು ಮಾಡಲಾಗಿದೆ.

ಶ್ರೀ ಎಸ್. ಎಂ. ಲಿಂಗಪ್ಪ.—ಈ ರಸ್ತೆ ನಿರ್ಮಾಣ ಆಗಿ 8 ವರ್ಷಗಳು ಆಗಿದೆಯೇ ಎಂದು ಪ್ರಶ್ನೆ?

ಶ್ರೀ ಟಿ. ಚನ್ನಯ್ಯ.—ಹಿಂದೆ ಈ ರಸ್ತೆ ನಿರ್ಮಾಣವಾಗಿಲ್ಲ. ಹೊಸದಾಗಿ ಮಾಡಬೇಕೆಂದು ಉದ್ದೇಶಿಸಲಾಗಿದೆ.

ಶ್ರೀ ಎಸ್. ಎಂ. ಲಿಂಗಪ್ಪ.—ಇದಕ್ಕಾಗಿ ಎಂಟು ಸಾವಿರ ರೂಪಾಯಿಗಳು ಖರ್ಚಾಗಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಹೊಸರಸ್ತೆ ಎಂದು ನಮಗೆ ವರದಿ ಬಂದಿದೆ.

ಶ್ರೀ ಎಸ್. ಎಂ. ಲಿಂಗಪ್ಪ.—ರಸ್ತೆ ಅಂದಾಜು ಯಾವಾಗ ತಯಾರು ಆಯಿತು?

ಶ್ರೀ ಟಿ. ಚನ್ನಯ್ಯ.—ಅಂದಾಜು ಈಗತಾನೆ ಸ್ವಲ್ಪ ದಿವಸಗಳಲ್ಲಿ ಮಾಡಿ ಕಳುಹಿಸಿದ್ದಾರೆ. ಹಣವನ್ನು ಜಾಗ್ರತೆಯಾಗಿ ಮಂಜೂರು ಮಾಡಲಾಗುತ್ತದೆ.

Municipal status to K.G.F. City.

Q.—390. Sri K. S. VASAN (Kolar Gold Fields).—

Will the Government be pleased to state :—

what steps they have taken to meet the longstanding aspirations of the people of Kolar Gold Fields City that the Civic Administration of this City be raised to a municipal status?

A.—Sri T. CHANNIAH (Minister for Public Health and Local Self-Government).—

On the recommendation of the committee constituted by Government in 1948, the K. G. F. Municipal Bill, 1942, was drafted with a view to establish a Municipality at K. G. F. and it was introduced in the Legislative Assembly and also referred to a Select Committee of the Legislative Assembly. The Select Committee after a detailed examination of the matter furnished a report to the effect that the said Bill was not suitable. Therefore, that Bill was withdrawn. The matter was further examined by Government, and the Mysore Mines (Amendment) Bill, 1955 was drafted with a view to providing for the constitution of a Municipal body consisting of a majority of elected representatives and to vest it with a corporate character and suitable powers, and was introduced in the last session of the Assembly.

This Bill is before the Legislature.

Sri K. S. VASAN.—I have no supplementaries.

Road from Yelerampura to Hiredoddavadi.

Q.—440. Sri MUDDURAMIAH (Koratagere-Madhugiri).—

Will the Government be pleased to state :—

(*a*) whether the inhabitants of Gollahalli, Singarihalli, Chikkadoddavadi and Huluvangala of Kolala Hobli, Koratagere Taluk, have sent up a representation requesting to form a road from Yelerampura to Hiredoddavadi ;

(*b*) if so, the steps taken by them so far?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) The matter is under examination.

ಶ್ರೀ ಮುದ್ದುರಾಮಯ್ಯ.—ಈ ರಸ್ತೆಯ ಅಂದಾಜು ತಯಾರು ಮಾಡಿಸಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಇನ್ನೂ ಅಂದಾಜು ತಯಾರು ಮಾಡಿಲ್ಲ. ಡೆಪ್ಯುಟಿ ಕಮಿಷನರು ಈಗ ಅದನ್ನು ಪರಿಶೀಲಿಸಿ ಅದರ ವಿಷಯದಲ್ಲಿ ಸರ್ಕಾರಕ್ಕೆ ಒಂದು ರಿಪೋರ್ಟನ್ನು ಕಳುಹಿಸಿಕೊಡುತ್ತಾರೆ.

ಶ್ರೀ ಮುದ್ದುರಾಮಯ್ಯ.—ಶಿಂಗ್ರಿಹಳ್ಳಿ ಕೆರೆ ಕಟ್ಟೆಯ ಮೇಲೆ ಹಳ್ಳಿಗಳಿಗೆ ಹೋಗುವುದಕ್ಕೆ ದಾರಿ ಇಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ರಸ್ತೆ ಅವಶ್ಯಕ ಎಂಬುದು ಗೊತ್ತಿದೆ. ಅದಕ್ಕೋಸ್ಕರ ಡೆಪ್ಯುಟಿ ಕಮಿಷನರು ಅದನ್ನು ಪರಿಶೀಲನೆಮಾಡಿ ಕಳುಹಿಸಿಕೊಡಬೇಕೆಂದು ತಿಳಿಸಲಾಗಿದೆ.

Idagur and Honnasettihalli Tanks (Restoration).

Q.—142. **Sri C. M. ANNAYYAPPA** (Gubbi).—

Will the Government be pleased to state :—

(*a*) how many years back the estimates in respect of Idagur and Honnasettihalli tanks in Gubbi taluk were sanctioned ;

(*b*) how many years back money was deposited by the people in connection with piece-work of the above tanks ;

(*c*) the number of persons and their names from whom deposits have been recieved ?

A.—**Sri Kadidal MANJAPPA** (Minister for Revenue and Public Works).—

(*a*) *Idagur tank* :

Original estimate in 1951.
Revised estimate in 1955.

Honnasettihalli tank :

In 1951.

(*b*) During 1952.

(*c*) *Idagur tank* :

4 persons
1. Sri Lakke Gowda
2. Sri Nanjundiah
3. Sri T. Masti Gowda
4. Sri K. Guddaiah

Honnasettihalli tank :

3 persons
1. Sri Narasappa
2. Sri Mudalagiri Gowda
3. Sri Nanjundaiah

ಶ್ರೀ ಸಿ. ಎಂ. ಅಣ್ಣಯ್ಯಪ್ಪ.—1951ನೇ ಇಸವಿಯಲ್ಲಿ ಅಂದಾಜು ತಯಾರಾಗಿ ಠೇವಣಿಕೊಟ್ಟಿದ್ದರ ಮೇಲೆ ತಾನೇ ಪುನಃ ಅಂದಾಜು ತಯಾರಾಗಿರುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಯಾವ ಕೆರೆಗೆ ಕೇಳುತ್ತಾ ಇರುವುದು ? ತಮ್ಮ ಪ್ರಶ್ನೆಯಲ್ಲಿ ಎರಡು ಕೆರೆಗಳಿವೆ.

ಶ್ರೀ ಸಿ. ಎಂ. ಅಣ್ಣಯ್ಯಪ್ಪ.—ಒಂದನೇ ಕೆರೆಗೆ revised estimate ತಯಾರಾಗಿ ಮಾಂಜೂರಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಾಲ್ಕು ವರ್ಷಗಳ ಮೊದಲೇ ತಯಾರಾಗಿ piece-work ಠೇವಣಿ ಕೊಟ್ಟಿದ್ದರಮೇಲೆ ಮಂಜೂರು ಆದುದು.

ಶ್ರೀ ಸಿ. ಎಂ. ಅಣ್ಣಯ್ಯಪ್ಪ.—ಪೀಸ್‌ವರ್ಕ್ ಠೇವಣಿ ಕೊಟ್ಟಿದ್ದರಮೇಲೆ revised estimate ತಯಾರಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

Jajur Tank, Challakere Taluk (Restoration).

Q.—195. **Sri V. MASIYAPPA** (Hiriyur).—

Will the Government be pleased to state :—

(*a*) whether the people of Jajur in Challakere taluk have been asking for the restoration of their village tank by raising the waste-weir and by providing a feeder channel from the Murudi Sanjeevanakere waste weir halla ;

(*b*) whether any estimates have been prepared ;

(*c*) whether the people have executed *muchalikas* for paying the contribution ;

(*d*) whether the estimates have been sanctioned ?

A.—**Sri Kadidal MANJAPPA** (Minister for Revenue and Public Works).—

(*a*) Yes.
(*b*) Yes.
(*c*) Yes.
(*d*) Not yet.

ಶ್ರೀ ವಿ. ಮಸಿಯಪ್ಪ.—ಈ estimate ಗಳನ್ನು ತಯಾರುಮಾಡಿ ಎಷ್ಟು ವರ್ಷಗಳಾದವು ಎಂಬುದನ್ನು ಹೇಳುತ್ತೀರಾ ?

Sri Kadidal MANJAPPA.—I am sorry I have no information.

ಶ್ರೀ ವಿ. ಮಸಿಯಪ್ಪ.—ರೈತರು ಮುಚ್ಚಳಿಕೆಗಳನ್ನು ಬರೆದುಕೊಟ್ಟು ಎಷ್ಟು ವರ್ಷಗಳಾದುವು ?

Sri Kadidal MANJAPPA.—I want notice.